ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ನಿರ್ದೇಶಕರ ಕಚೇರಿ, ವಾರ್ತಾ ಸೌಧ,**

**ನಂ.17, ಭಗವಾನ್ ಮಹಾವೀರ ರಸ್ತೆ(ಇನ್‌ಫೆಂಟ್ರ ರಸ್ತೆ) ಬೆಂಗಳೂರು–560001**

**ಸಂಖ್ಯೆ: ವಾಸಾಸಂ:ಸು.ಮ.ಪ.2018–2019 ದಿನಾಂಕ: 23–01–2019**

## ಪತ್ರಿಕಾ ಸೂಚನೆ

ಗಣರಾಜ್ಯೋತ್ಸವ ದಿನಾಚರಣೆಯ ರಾಜ್ಯ ಮಟ್ಟದ ಸಮಾರಂಭದ ಆಮಂತ್ರಣ ಪತ್ರಗಳನ್ನು ಜನವರಿ 24 ಮತ್ತು 25 ರಂದು ಕಾರ್ಯ ವೇಳೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯಲ್ಲಿ ಪಡೆಯುವಂತೆ ಕೋರಲಾಗಿದೆ.

ಡಿ ಪಿ ಮುರಳೀಧರ್

ಉಪ ನಿರ್ದೇಶಕರು (ವಾರ್ತೆ)

## PRESS INTIMATION

KINDLY COLLECT MEDIA INVITES FOR THE STATE-LEVEL REPUBLIC DAY FUNCTION ON JANUARY 24 AND 25 DURING OFFICE HOURS AT THE NEWS SECTION OF THE DEPARTMENT OF INFORMATION AND PUBLIC RELATIONS.

D. P. MURALIDHAR
DEPUTY DIRECTOR (NEWS)

## ವಿಶೇಷ ಪತ್ರಿಕಾ ಆಮಂತ್ರಣ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತ ಶ್ರೀ ಎನ್. ಮಂಜುನಾಥ ಪ್ರಸಾದ್, ಬೆಂಗಳೂರು ನಗರ ಆರಕ್ಷಕ ಆಯುಕ್ತ ಶ್ರೀ ಟಿ. ಸುನೀಲ್ ಕುಮಾರ್ ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿ ಶ್ರೀ ಬಿ. ಎಂ. ವಿಜಯಶಂಕರ್ ಅವರು ಜನವರಿ 24 ರಂದು ಬೆಳಿಗ್ಗೆ 9-00 ಗಂಟೆಗೆ ರಾಜಭವನ ರಸ್ತೆಯಲ್ಲಿರುವ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಕವಾಯತು ಮೈದಾನದಲ್ಲಿ 70 ನೇ ಗಣರಾಜ್ಯೋತ್ಸವ ದಿನಾಚರಣೆಯ ರಾಜ್ಯ ಮಟ್ಟದ ಸಮಾರಂಭದ ಸಿದ್ದತೆಗಳ ಕುರಿತು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ವಿದ್ಯುನ್ಮಾನ ಹಾಗೂ ಮುದ್ರಣ ಮಾಧ್ಯಮ ಪ್ರತಿನಿಧಿಸುವ ಮಾಧ್ಯಮದವರು ಮಹತ್ವಯುತ ಈ ಪತ್ರಿಕಾಗೋಷ್ಠಿಗೆ ಹಾಜರಾಗಿ ವ್ಯಾಪಕ ಪ್ರಚಾರ ದೊರಕಿಸಿಕೊಡಲು ಕೋರಲಾಗಿದೆ.

ಡಿ. ಪಿ. ಮುರಳೀಧರ್
ಉಪ ನಿರ್ದೇಶಕರು ( ವಾರ್ತೆ )

ಡಿ ಪಿ ಎಂ

## SPECIAL PRESS INVITATION

The Commissioner for Bruhat Bengaluru Mahanagara Palike Mr N. Manjunath Prasad, the Commissioner of Police for Bengaluru City Mr T. Suneel Kumar and the Deputy Commissioner for Bengaluru Urban District Mr B. M. Vijay Shankar will address a Press Conference on the Preparations for State-Level Celebrations of the70th REPUBLIC DAY on JANUARY 24 at 9-00 A M at the  Field Marshal Manek Shaw Parade Grounds on Raj Bhavan Road.

Media Persons, representing both the Electronic and Print Media, are kindly attend this Important Programme and give wide coverage.

D. P. MURALIDHAR
DEPUTY DIRECTOR (NEWS)

DPM

## ವಿಶೇಷ ಪತ್ರಿಕಾ ಆಮಂತ್ರಣ

ಹೆಸರಾಂತ ಶಿಕ್ಷಣ ತಜ್ಞ ಹಾಗೂ ಮಾಜಿ ಸಚಿವ ಪ್ರೊ ಬಿ. ಕೆ. ಚಂದ್ರಶೇಖರ್ ಅವರು ಜನವರಿ 24 ರಂದು ಬೆಳಿಗ್ಗೆ 10–30 ಗಂಟೆಗೆ ನಗರದ ಜೆ ಪಿ ನಗರ ಐದನೇ ಹಂತದ ವಿನಾಯಕ ನಗರ ವೃತ್ತ ಸಮೀಪದ ದೊರೆಸಾನಿಪಾಳ್ಯ ಅರಣ್ಯ ಶಿಬಿರದಲ್ಲಿರುವ ಪರಿಸರ ನಿರ್ವಹಣಾ ಮತ್ತು ನೀತಿ ಸಂಶೋಧನಾ ಸಂಸ್ಥೆಯ ಹಸಿರು ಭವನದಲ್ಲಿ ಹವಾಮಾನ ಬದಲಾವಣೆ ಕುರಿತ ಎರಡು–ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದಾರೆ.

ಅರಣ್ಯ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ವಿಜಯ್ ಕುಮಾರ್ ಗೋಗೋಯ್, ಪರಿಸರ ಮತ್ತು ಜೀವಿ ಶಾಸ್ತ್ರ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಎನ್. ಎಲ್. ಶಾಂತ್‌ಕುಮಾರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಂಜಯ್ ಮೋಹನ್, ಪರಿಸರ ನಿರ್ವಹಣಾ ಮತ್ತು ನೀತಿ

ಸಂಶೋಧನಾ ಸಂಸ್ಥೆಯ ಮಹಾ ನಿರ್ದೇಶಕಿ ರಿತು ಕಕ್ಕರ್ ಅವರೂ ಸೇರಿದಂತೆ ಹಲವು ಗಣ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಕರೆದೊಯ್ಯಲು ಸಂಸ್ಥೆ ವಾಹನ ವ್ಯವಸ್ಥೆ ಮಾಡಿದೆ. ಸಂಸ್ಥೆಯ ವಾಹನ ಅಂದು ಬೆಳಿಗ್ಗೆ 9–30 ಗಂಟೆಗೆ ವಾರ್ತಾ ಸೌಧದ ಆವರಣದಿಂದ ಗಮ್ಯಸ್ಥಾನದತ್ತ ತೆರಳಲಿದೆ.

ಈ ಕಾರ್ಯಕ್ರಮದಲ್ಲಿ ಹಾಜರಾಗಿ ವ್ಯಾಪಕ ಪ್ರಚಾರದೊರಕಿಸಿಕೊಡುವಂತೆ ಮಾಧ್ಯಮದವರಲ್ಲಿ ಕೋರಲಾಗಿದೆ.

ಡಿ ಪಿ ಮುರಳೀಧರ್
ಉಪ ನಿರ್ದೇಶಕರು (ವಾರ್ತೆ)

## SPECIAL PRESS INVITATION

Eminent Educationist and Former Minister Prof B K Chandrashekhar will inaugurate a two-day  National Seminar on Climate Change on January 24 at 10-30 A M at the Environmental Management and Policy Research Institute (EMPRI) at "Hasiru Bhavana", Doresanipalya Forest Campus, Vinayaka Nagar Circle, 5th Phase,J.P Nagar in Bengaluru.

The Principal Secretary to Government in the Department of Forests Mr Vijay Kumar Gogi, the Principal Secretary to Government in the Department of Environment and Ecology Mr N L Shanth Kumar, the Principal Chief Conservator of Forests Mr Sanjay Mohan, the Director General of Environmental Management and Policy Research Institute Ms Ritu Kakkar are among the many dignitaries are scheduled to participate in this function.

The Institute has made vehicle arrangements to take Media Persons to the venue. The Institute's vehicle  will  at 9-30 A M towards the destination from Vartha Soudha.

Media Persons are requested to kindly attend and give wide coverage to this important event.

D. P. MURALIDHAR
DEPUTY DIRECTOR (NEWS)

## ಪತ್ರಿಕಾ ಪ್ರಕಟಣೆ

ಬೆಂಗಳೂರು, 23 ಜನವರಿ 2019

ಜನವರಿ 24, ಗುರುವಾರ ಮಧ್ಯಾಹ್ನ 12:45ಕ್ಕೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಚಟುವಟಿಕೆಗಳನ್ನು ವಿವರಿಸಲು ಪತ್ರಿಕಾ ಘೋಷ್ಠಿಯನ್ನು ಕರೆಯಲಾಗಿದೆ. ಸಂಸ್ಥೆಯ ಕುಲಪತಿಗಳಾದ ಡಾ.ಎಚ್.ಸಚ್ಚಿದಾನಂದ ರವರು ಪತ್ರಿಕಾ ಘೋಷ್ಠಿಯನ್ನು ಉದ್ದೇಶಿಸಿ ವಿಶ್ವವಿದ್ಯಾಲಯದ ಚಹಟುವಟಿಕೆಗಳನ್ನು ವಿವರಿಸಲಿದ್ದಾರೆ.

ಪತ್ರಿಕಾ ಘೋಷ್ಠಿ ದಿನಾಂಕ: 24–01–2019

ಸಮಯ: ಮಧ್ಯಾಹ್ನ 12:45

ಸ್ಥಳ: ಬೋರ್ಡ್ ರೂಮ್. ಮೊದಲನೇ ಮಹಡಿ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.

## ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು, 23 ಜನವರಿ 2019

ಜನವರಿ 24, ಗುರುವಾರದಂದು ಬೆಳಿಗ್ಗೆ 10 ಗಂಟೆಗೆ 2017 ನೇ ಸಾಲಿನ ಯುವ ಬರಹಗಾರರ ಚೊಚ್ಚಲ ಕೃತಿಗಳ ಲೋಕಾರ್ಪಣೆ ಸಮಾರಂಭ ಹಾಗೂ ಶಾಲಾ–ಕಾಲೇಜುಗಳಿಗೆ ಉಚಿತ ಪುಸ್ತಕ ವಿತರಣೆ ಕಾರ್ಯಕ್ರಮವನ್ನು ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ.ರಸ್ತೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಪುಸ್ತಕ ಬಿಡುಗಡೆಯನ್ನು ಹಿರಿಯ ಸಾಹಿತಿ, ಡಾ.ಸಿದ್ಧಲಿಂಗಯ್ಯ ನವರು ಹಾಗೂ ಪುಸ್ತಕ ವಿತರಣೆಯನ್ನು ಖ್ಯಾತ ಸಾಹಿತಿ, ವಸುಂಧರಾ ಭೂಪತಿಯವರು ಮಾಡಲಿದ್ದಾರೆ.

ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

ಸಮಯ: ಬೆಳಿಗ್ಗೆ 10 ಗಂಟೆ